# ಹೊಳೆನರಸೀಪುರದ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ

**ಕ್ರಿ.ಮಿಸ್.112/2018**

| | | |
|---|---|---|
| ಸಾಕ್ಷಿಯ ಹೆಸರು | ಃ ಸುರೇಶ್ ಜಿ.ಪಿ. | ಆರ್.ಡಬ್ಲ್ಯೂ 1 |
| ತಂದೆ ಹೆಸರು | ಃ ಪುಟ್ಟೇಗೌಡ | |
| ವಯಸ್ಸು | ಃ 36 ವರ್ಷ | **ಪ್ರಮಾಣೀಕರಿಸಿದ ದಿಃ** 28/03/2022 |
| ವೃತ್ತಿ | ಃ ಕೆ.ಎಸ್.ಆರ್.ಟಿ.ಸಿ. ಚಾಲಕ ಮತ್ತು ನಿರ್ವಾಹಕ | |
| ವಾಸ | ಃ ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ. | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಃ

ನಾನು ಅರ್ಜಿದಾಳನನ್ನು ಕಾನೂನು ಪ್ರಕಾರ ಮದುವೆಯಾಗಿರುವುದಿಲ್ಲ. ಅರ್ಜಿದಾಳಳು ನನ್ನ ಕಾನೂನು ಬದ್ಧ ಹೆಂಡತಿಯಾಗಿರುವುದಿಲ್ಲ. ಎರಡನೇ ಅರ್ಜಿದಾರನು ನನ್ನ ಮಗನಲ್ಲ. ನಾನು ಲಾರಿ ಚಾಲಕನಾಗಿ ಕೆಲಸ ಮಾಡುತ್ತಿಲ್ಲ. ಅರ್ಜಿದಾರಳನು ನಾನು ಪ್ರೀತಿಸಿ ಮದುವೆಯಾಗಿರುವುದಿಲ್ಲ. ಅರ್ಜಿದಾರಳ ಅಣ್ಣನಾದ ಸಂತೋಷ್ ತರೀಕೆರೆ ಪೋಲೀಸ್ ಠಾಣೆಯಲ್ಲಿ ಗೃಹರಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ನನ್ನ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿವುದಾಗಿ ಹೆದರಿಸಿ ಅರ್ಜಿದಾರಳಿಗೆ ಮೋಸದಿಂದ ಮದುವೆಯ ಪ್ರಮಾಣಪತ್ರವನ್ನು ತರೀಕೆರೆ ಸಬ್ ರಿಜಸ್ಟರ್ ಕಚೇರಿಯಿಂದ ಪಡೆದಿರುತ್ತಾನೆ ನಿಪಿ.1 ರ ಮೇಲೆ ನನಗೆ ಅರಣ್ಯ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ನನ್ನ ಸಹಿ ಪಡೆದಿರುತ್ತಾನೆ. ಒಂದನೇ ಅರ್ಜಿದಾರಳು ಚಿತ್ರದುರ್ಗಾ ಜಿಲ್ಲೆಯ ಮಲ್ಲಾಡಿ ನಿವಾಸಿಯ ನಿಂಗರಾಜುವಿನೊಂದಿಗೆ ಮದುವೆಯಾಗಿ ಹೆಣ್ಣು ಮಗು ಜನಿಸಿರುತ್ತದೆ. ಸದರಿ ಮದುವೆಯ ವಿಚ್ಛೇದನ ಪಡೆಯದೇ ನಿಪಿ.1 ಅನ್ನು ಪಡೆದಿರುತ್ತಾರೆ.

ನಾನು ಅರ್ಜಿದಾರಳ ಕುಟುಂಬದಿಂದ 1 ಲಕ್ಷ ನಗದು ಹಣ ಹಾಗೂ 150 ಗ್ರಾಂ ಚಿನ್ನ ಪಡೆದಿರುವುದಿಲ್ಲ. ಅರ್ಜಿದಾರಳ ಗ್ರಾಮಸ್ಥರು ಮತ್ತು ನಮ್ಮ ಗ್ರಾಮಸ್ಥರು ರಾಜೀ ಪಂಚಾಯ್ತಿ ಮಾಡಿದಾಗಾ ಅರ್ಜಿದಾರಳು ಮತ್ತು ತನ್ನ ಸಹೋದರ ನಿಪಿ.1 ಅನ್ನು ಪಡೆದಿರುವುದು ತಪ್ಪಾಗಿರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ರಾಜೀ ಪಂಚಾಯ್ತಿಯಲ್ಲಿ ಇನ್ನುಮುಂದೆ ನನಗೆ ಅರ್ಜಿದಾರಳಿಂದ ಯಾವುದೇ ತೊಂದರೆ ಆಗುವುದಿಲ್ಲ ಎಂದು ವಿಶ್ವಾಸ ನೀಡಿ ಕಳುಹಿಸಿರುತ್ತಾರೆ. ನಂತರ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕೆಲಸ ಸಿಕ್ಕ ಮೇಲೆ ಅರ್ಜಿದಾರಳು ಸುಳ್ಳು ಪ್ರಕರಣ ದಾಖಲು ಮಾಡಿ ನ್ಯಾಯಾಲಯದಿಂದ ನೋಟೀಸ್ ನೀಡಿರುತ್ತಾರೆ.

ಅರ್ಜಿದಾರರಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ. ನಾನು ಯಾವುದೇ ಮಾಸಿಕ ನಿರ್ವಾಹಣಕ್ಕೆ ಭಾಧ್ಯನಲ್ಲ.

(ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲವಾಕಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಒ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
**ಹೊಳೆನರಸೀಪುರ**